(ಅನುಬಂಧ–1)

4. ವರದಿಯನ್ನೊಪ್ಪಿಸುವುದು

ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಮಾನ್ಯ ಉಪಾಧ್ಯಕ್ಷರು ಹಾಗೂ ಸಮಿತಿಯ ಅಧ್ಯಕ್ಷರು):– ಮಾನ್ಯ ಅಧ್ಯಕ್ಷರೆ, ನಾನು 2013–14ನೇ ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ 5ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು:– ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರು:– ಈಗ ಶೂನ್ಯವೇಳೆಯಲ್ಲಿ 4–5 ವಿಷಯಗಳಿವೆ.

ಶ್ರೀ ಆರ್. ಅಶೋಕ:– ಮಾನ್ಯ ಅಧ್ಯಕ್ಷರೆ, ನಿನ್ನೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು. 7.30 ಗಂಟೆಯಾಯಿತೆಂದು ಸಭೆ ಮುಂದೂಡಿದ್ದೀರಿ. ಇವತ್ತು ಮತ್ತೆ 7.30 ಗಂಟೆಯಾದರೆ ಉಪಯೋಗ ವಾಗುವುದಿಲ್ಲ.

ಅಧ್ಯಕ್ಷರು:– ಅಯಿತು, ಪ್ರಾರಂಭ ಮಾಡಿ.

5. ನಿಯಮ 69ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ:– ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದ್ದು ಇಲಾಖೆಯಲ್ಲಿ ಅರಾಜಕತೆಯ ವಾತಾವರಣ ನಿರ್ಮಾಣವಾಗಿರುವ ಬಗ್ಗೆ

ಶ್ರೀ ಆರ್. ಅಶೋಕ್ (ಪದ್ಮನಾಭ ನಗರ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆಯೆಂಬ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು. ತಾವು ನಮಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ. ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಕಳೆದ ಒಂದು ವರ್ಷದಲ್ಲಿ ಕರ್ನಾಟಕದ ಗೃಹ ಇಲಾಖೆ ಒಂದು ರೀತಿಯಲ್ಲಿ ಹಳಿ ತಪ್ಪಿದ ಗೃಹ ಇಲಾಖೆಯಾಗಿದೆ. ಕಳೆದ ಒಂದು ವರ್ಷದಲ್ಲಿ ಹಲವಾರು ಘಟಕಗಳು ನಡೆದಿದೆ. ಅದನ್ನು ನಿಭಾಯಿಸುವುದರಲ್ಲಿ ಸರ್ಕಾರ